# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

## ಪ್ರಶ್ನೆ

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯಲ್ಲಿ 2017-18ರ ಮೊದಲೇ ಸರ್ಕಾರದ ಅನುಮತಿ ಪಡೆದು ಸಾವಿರಾರು ಖಾಸಗಿ ಶಾಲೆಗಳು ಪ್ರಾರಂಭಗೊಂಡಿವೆ. ಈ ಶಾಲೆಗಳನ್ನು ಉನ್ನತೀಕರಿಸುವ ವೇಳೆ ಅಂದರೆ 1 ರಿಂದ 5ನೇ ತರಗತಿ ಇರುವ ಕಡೆ, 6 ರಿಂದ 7ನೇ ತರಗತಿ, 6 ರಿಂದ 8ನೇ ತರಗತಿ ಇರುವ ಕಡೆ 9 ರಿಂದ 10ನೇ ತರಗತಿಗಳನ್ನು ಪ್ರಾರಂಭಿಸಲು ಹಾಗೂ ಮಾನ್ಯತೆ ನವೀಕರಿಸಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಶುಲ್ಕ ಅಗ್ನಿ, ಕಟ್ಟಡ ಸುರಕ್ಷತೆ ಮತ್ತು ಭೂಪರಿವರ್ತನೆ ಸೇರಿದಂತೆ ಸುಮಾರು 37 ದಾಖಲಾತಿಗಳನ್ನು ಪ್ರತಿ ವರ್ಷ ಸಲ್ಲಿಸಬೇಕಾಗಿರುತ್ತದೆ. ಸರ್ಕಾರ ದೀರ್ಘಕಾಲದಿಂದ ಪ್ರಾರಂಭಗೊಂಡಿರುವ ಶಾಲೆಗಳಿಗೂ ಅನ್ವಯಿಸುವಂತೆ ಸುರಕ್ಷತಾ ಮಾರ್ಗಸೂಚಿಯನ್ನು ಕಡ್ಡಾಯಗೊಳಿಸಿ, ಸದರಿ ದಾಖಲಾತಿಗಳನ್ನು ಪ್ರತಿ ವರ್ಷ ಸಲ್ಲಿಸುವಂತೆ ಆದೇಶಿಸಿರುತ್ತದೆ. ಈ ಸಂಬಂಧ ರಾಜ್ಯ ಉಚ್ಚನ್ಯಾಯಾಲಯದ ಆದೇಶ ಸಂಖ್ಯೆ: W.P. NO. 2348/2023, ದಿನಾಂಕ:8-2-2023ರಲ್ಲಿ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸಿ, ಆದೇಶಿಸಲಾಗಿರುತ್ತದೆ. ಇದನ್ನು ಜಾರಿಗೊಳಿಸುವ ಸಂಬಂಧ ಆನ್‌ಲೈನ್‌ನಲ್ಲಿ ಕೆಲವು ಮಾರ್ಪಾಡುಗಳನ್ನು ಇಲಾಖೆಯು ಇದುವರೆವಿಗೂ ಮಾಡದೆ ಇರುವುದರಿಂದ ಮಾನ್ಯತೆ ನವೀಕರಣಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲಾಗುತ್ತಿಲ್ಲ.

ಮೇಲ್ಕಂಡ ಕಾರಣಗಳ ಹಿನ್ನಲೆಯಲ್ಲಿ ನ್ಯಾಯಾಲಯದ ತೀರ್ಪಿನಂತೆ ಆನ್‌ಲೈನ್‌ನಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಬೇಕು ಮತ್ತು ಉಪನಿರ್ದೇಶಕರು ಒಂದು ವರ್ಷಗಳಿಗೆ ಮಾತ್ರ ಮಾನ್ಯತೆ ನವೀಕರಿಸುವ ಬದಲು ಕನಿಷ್ಠ 5 ವರ್ಷಗಳವರೆಗೆ ನವೀಕರಿಸುವಂತೆ ಆದೇಶಿಸಬೇಕಾಗಿ ಕೋರಿರುವ ಕುರಿತು.

## ಉತ್ತರ

ಕರ್ನಾಟಕ ಶಿಕ್ಷಣ ಕಾಯಿದೆ 1983 ಸೆಕ್ಷನ್-36 ಮತ್ತು ಆರ್.ಟಿ.ಇ ಕಾಯ್ದೆ-2009 ಸೆಕ್ಷನ್ 18 ರಂತೆ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಶಾಲೆಯ ಮಾನ್ಯತೆ/ ಮಾನ್ಯತೆ ನವೀಕರಣವನ್ನು 2021-22ನೇ ಸಾಲಿನಿಂದ ಆನ್‌ಲೈನ್ ಮುಖಾಂತರ ಅಭಿವೃದ್ಧಿಪಡಿಸಿರುವ ತಂತ್ರಾಂಶದಲ್ಲಿ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ತಂತ್ರಾಂಶದಲ್ಲಿ ಸಲ್ಲಿಕೆಯಾದಂತಹ ಅರ್ಜಿಯನ್ನು ಪ್ರಾಧಿಕಾರವು ಪರಿಶೀಲಿಸಿ ಕ್ರಮವಹಿಸಲು ಕಾಲಮಿತಿಯನ್ನು ಸಹ ನಿಗಧಿಪಡಿಸಿದೆ. ಒಂದು ವೇಳೆ ಆಡಳಿತ ಮಂಡಳಿಯು ಸಲ್ಲಿಸಿದ ಅರ್ಜಿಯಲ್ಲಿ ಪೂರಕ ದಾಖಲೆಗಳ ಕೊರತೆ ಇದ್ದಲ್ಲಿ ಅಂತಹ ಆಡಳಿತ ಮಂಡಳಿಗೆ ತಂತ್ರಾಂಶದ ಮೂಲಕವೇ ಹಿಂದಿರುಗಿಸಿ, ದಾಖಲೆಗಳೊಂದಿಗೆ ಮರುಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಎಲ್ಲಾ ಪೂರಕ ದಾಖಲೆಗಳೊಂದಿಗೆ ಸಲ್ಲಿಸಿದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಪ್ರಾಧಿಕಾರವು 05 ವರ್ಷಗಳಿಗೆ ಮಾನ್ಯತೆ ನವೀಕರಿಸಲಾಗುತ್ತಿದೆ.

ಶಾಲಾ ಕಟ್ಟಡ ಸುರಕ್ಷತೆಗೆ ಸಂಬಂಧಪಟ್ಟಂತೆ ಲೋಕೋಪಯೋಗಿ ಇಲಾಖೆಯು ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ:6-5-2022 ಮತ್ತು ಅಗ್ನಿ ಸುರಕ್ಷತೆಗೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಸ್ಥಾಯಿ ಆದೇಶ ಸಂಖ್ಯೆ 156-ಎ (ಜಿಬಿಸಿ-(2), 044/2020-21, ದಿನಾಂಕ:25-1-2022 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಡಿ 172 ಎಸ್.ಎಫ್.ಬಿ. 2022, ದಿನಾಂಕ:21-6-2022 ರಲ್ಲಿ ಪ್ರಮಾಣ ಪತ್ರಗಳನ್ನು ನೀಡುವ ಪ್ರಾಧಿಕಾರಗಳನ್ನು ವಿಕೇಂದ್ರಿಕರಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯು ದಿನಾಂಕ:18-5-2022ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು ಅದರಂತೆ ಆಯುಕ್ತಾಲಯದಿಂದ ದಿನಾಂಕ 6-6-2022ರಲ್ಲಿ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

ಆರ್.ಟಿ.ಇ ನಿಯಮ-2012ರ ಉಪನಿಯಮ 11(6)ರ ಪ್ರಕಾರ ಮಾನ್ಯತೆಯನ್ನು 05 ವರ್ಷಗಳಿಗೆ ನವೀಕರಿಸಲು ಸೀಮಿತಗೊಳಿಸಲಾಗಿದೆ. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ) ನಿಯಮಗಳು 2018, ದಿನಾಂಕ 7-3-2018ರ ಅಧಿಸೂಚನೆಯಲ್ಲಿ ನಿಯಮ-4 (3) (iii) ರಲ್ಲಿ ಕನಿಷ್ಠ 10 ವರ್ಷಗಳೆಂದು ಅಧಿಸೂಚಿಸಲಾಗಿದೆ.

**ಸಂಖ್ಯೆ:ಇಪಿ 200 ಪಿಜಿಸಿ 2023**

**(ಎಸ್. ಮಧು ಬಂಗಾರಪ್ಪ)**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು